File No. HORTI/336/HGM/2020-admn-Horti-Sec (Computer No. 342335)

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 270
ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ
ಉತ್ತರಿಸುವ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸಬೇಕಾದ ದಿನಾಂಕ : 22-09-2020

*****

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| ಅ) | ಮಂಡ್ಯ ಜಿಲ್ಲೆ ನಾಗಮಂಗಲ ಮತ್ತು ಪಾಂಡವಪುರ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಹಣ್ಣು, ತರಕಾರಿ ಮತ್ತು ಹೂ ಬೆಳೆಯುವಂತಹ ತಾಲ್ಲೂಕುಗಳು ಯಾವುವು; ಈ ತಾಲ್ಲೂಕುಗಳಲ್ಲಿ ಅಥವಾ ಹೋಬಳಿ ಕೇಂದ್ರಗಳಲ್ಲಿ ಕೋಲ್ಡ್ ಸ್ಟೋರೇಜ್ ಘಟಕ ಸ್ಥಾಪಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಬೆಳೆ ಸಮೀಕ್ಷೆ ಅನುಸಾರ ಕ್ರಮವಾಗಿ 581 ಹೆ. ಹಣ್ಣು, 721 ಹೆ. ತರಕಾರಿ ಮತ್ತು 9 ಹೆ. ಹೂವಿನ ಬೆಳೆಗಳ ವಿಸ್ತೀರ್ಣವಿರುತ್ತದೆ.<br><br>ಪಾಂಡವಪುರ ತಾಲ್ಲೂಕಿನಲ್ಲಿ ಬೆಳೆ ಸಮೀಕ್ಷೆ ಅನುಸಾರ ಕ್ರಮವಾಗಿ 739 ಹೆ. ಹಣ್ಣು, 2210 ಹೆ. ತರಕಾರಿ ಮತ್ತು 973 ಹೆ. ಹೂವಿನ ಬೆಳೆಗಳ ವಿಸ್ತೀರ್ಣವಿರುತ್ತದೆ.<br><br>ಪ್ರಸ್ತುತ ನಾಗಮಂಗಲ ಮತ್ತು ಪಾಂಡವಪುರ ತಾಲ್ಲೂಕುಗಳಲ್ಲಿ ಅಥವಾ ಹೋಬಳಿ ಕೇಂದ್ರಗಳಲ್ಲಿ ಕೋಲ್ಡ್ ಸ್ಟೋರೇಜ್ ಘಟಕ ಸ್ಥಾಪಿಸಲು ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. |
| ಆ) | ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಬೆಳೆಯುವ ಹಣ್ಣು ಮತ್ತು ತರಕಾರಿಗಳನ್ನು ಸಂರಕ್ಷಿಸಲು ಕೋಲ್ಡ್ ಸ್ಟೋರೇಜ್ ಘಟಕ ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ; | ಹೌದು. |
| ಇ) | ಇದ್ದಲ್ಲಿ, ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಯಾವ ಯಾವ ತಾಲ್ಲೂಕು ಕೇಂದ್ರಗಳಲ್ಲಿ ಈ ಘಟಕಗಳನ್ನು ಸ್ಥಾಪಿಸಲು ಸ್ಥಳ ಗುರುತು ಮಾಡಲಾಗಿದೆ; ಘಟಕ ಸ್ಥಾಪನೆ ಮಾಡಲು ಮಂಜೂರಾಗಿರುವ ಅನುದಾನವೆಷ್ಟು; ಮತ್ತು ಕಾಮಗಾರಿ ಯಾವ ಹಂತದಲ್ಲಿದೆ? | ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಕೋಲ್ಡ್ ಸ್ಟೋರೇಜ್ ಘಟಕ ನಿರ್ಮಿಸಲು ರೂ.532.44 ಲಕ್ಷಗಳ ಯೋಜನಾ ಪ್ರಸ್ತಾವನೆಯನ್ನು 2020-21 ನೇ ಸಾಲಿನ RIDF (Rural Infrastructure Development Fund) ಯೋಜನೆಯಡಿ ಸಲ್ಲಿಸಲಾಗಿರುತ್ತದೆ. |

ಸಂ: HORTI/336/HGM/2020-admn-Horti-Sec

(ನಾರಾಯಣ ಗೌಡ)
ತೋಟಗಾರಿಕೆ, ಪೌರಾಡಳಿತ

Generated from eOffice by DR.NARAYANAGOWDA, HORTICULTURE MINISTER, Urban Development Department on 19/09/20 05:49 PM